ಪ್ರಧಾನ ಸಿವಿಲ್ ಜಡ್ಜ್ ವತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

ಸಿಸಿ -258/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರತ್ನಮ್ಮ | ಸಿಡಬ್ಲ್ಯೂ 2 |
| ಗಂಡನ ಹೆಸರು | - | ಗೋವಿಂದಯ್ಯ | ಪಿಡಬ್ಲ್ಯೂ 2 |
| ವಯಸ್ಸು | - | 48 ವರ್ಷ | |
| ಕೆಲಸ | - | ವ್ಯವಸಾಯ | ಸಾ.ಪ್ರ.ಬೋ |
| ವಾಸ | - | ಬಸವರಾಜಪುರ | ದಿ. 02.03.2020 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಚಾಸಾ 1 ನನ್ನ ಮಗ. ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಗ್ರಾಮಸ್ಥರು. ಅವರ ಪರಿಚಯ ನನಗಿದೆ. ನಮ್ಮ ಮನೆ ಪಕ್ಕದಲ್ಲಿ ಗಣಪತಿಯನ್ನು ಕುರಿಸಿದ್ದರು. ನಮ್ಮ ಮನೆಯಿಂದ ಲೈಟನ್ನು ಗಣಪತಿ ಹತ್ತಿರ ತೆಗೆದುಕೊಂಡಿದ್ದರು. 6 ವರ್ಷದ ಹಿಂದೆ ರಾತ್ರಿ 9 ಗಂಟೆಯಲ್ಲಿ ನಾನು ನನ್ನ ಮಗ ಮನೆಯಲ್ಲಿದ್ದಾಗ ಆರೋಪಿತರೆಲ್ಲರೂ ನಮ್ಮ ಮನೆ ಒಳಗೆ ನುಗ್ಗಿ ನನ್ನ ಮಗನಿಗೆ ಕೈಗಳಿಂದ ಹೊಡೆದು ನೋವುಂಟು ಮಾಡಿದ್ದರು. ನಾನು ಜಗಳ ಬಿಡಿಸಲು ಹೋದಾಗ ಗಿರಿಶ ನನ್ನನ್ನು ಏಳೆದು ಬಿಟ್ಟಿರುತ್ತಾನೆ. ಆರೋಪಿತರು ಅವಾಚ್ಯ ಶಬ್ದಗಳಿಂದ ನನ್ನನ್ನು ಬೈದಿರುತ್ತಾರೆ. ಆಗ ಚಾಸಾ 2 ಮತ್ತು 4, ಚಾಸಾ 1 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿ 2 ರಿಂದ 5 ರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಗೈರು ಹಾಜರಿರುವ ಆರೋಪಿ 1 ಮತ್ತು 6 ನ್ನು ಗುರುತಿಸಲು ತಕರಾರು ಮಾಡಿರುವುದಿಲ್ಲ.

ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಎಸ್ ಡಿ ವಕೀಲರಿಂದಃ-

1) ಆರೋಪಿತರ ಮನೆಗಳು ನಮ್ಮ ಮನೆ ಅಕ್ಕಪಕ್ಕದಲ್ಲಿರುತ್ತವೆ ಎಂದರೆ ಸರಿಯಲ್ಲ. ನಮ್ಮೂರಿನಲ್ಲಿ ಗಣಪತಿಯನ್ನು ಗ್ರಾಮದ ಮುಖ್ಯಸ್ಥರು ಕುರಿಸಿರುತ್ತಾರೆ ಎಂದರೆ ಸರಿಯಲ್ಲ. ಗಣಪತಿ ಎತ್ತರ ನಮ್ಮ ಮನೆಯಿಂದ ಕರೆಂಟ್ ಎಳೆದುಕೊಂಡಿದ್ದರು. ಈ ದೂರು ಕೊಡುವುದಕ್ಕಿಂತ 3 ವರ್ಷದ ಮೊದಲು ಭವಂತಗೂ ನನ್ನ ಗಂಡನಿಗೂ ಗಲಾಟೆ ಆಗಿತ್ತು. 1 ನೇ ಆರೋಪಿಗೂ ನಮಗೂ 8 ವರ್ಷಗಳಿಂದ ವಯಮನಸ್ಸಿದೆ ಎಂದರೆ ಸರಿಯಲ್ಲ. ಗಲಾಟೆ ಆಗುವುದಕ್ಕಿಂತ ಮೊದಲೇ ನಮ್ಮ ಮನೆಯವರಿಗೂ ಆರೋಪಿತರಿಗೂ ಪೋನಿನಲ್ಲಿ ಮಾತುಕತೆ ಆಗಿತ್ತು ಎಂದರೆ, ಸಾಕ್ಷಿಯು ಮನೆಯ

ಹತ್ತಿರ ಬಂದು ಗಲಾಟೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಮೊದಲು ಗಲಾಟೆ ಆಗಿರುವುದಕ್ಕೆ ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ. ನಮ್ಮೂರಿನ ಪೋಲಿಸ ಮಹೇಶ ನನ್ನ ಅಳಿಮಯ್ಯ ಎಂದರೆ ಸರಿಯಲ್ಲ. ಚಾಸಾ 3 ಮತ್ತು 4 ನನ್ನ ಬಾವನ ಮಕ್ಕಳು ಎಂದರೆ ನಿಜ. ಮಹೇಶ ನನ್ನ ಅಳಿಯ ಆಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅತ್ತಿಗೆ ಮಗ ಎಂದು ಹೇಳುತ್ತಾರೆ. ಮಹೇಶ ಪೋಲಿಸ ಆಗಿರುವುದನ್ನು ದುರುಪಯೋಗ ಮಾಡಿಕೊಂಡು ಸುಳ್ಳು ದೂರನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ.

2) 1 ನೇ ಆರೋಪಿಗೂ ನನ್ನ ಮಗನಿಗೂ ಒಂದು ಹುಡುಗಿಯ ಸಂಬಂದ ಸುಮಾರು ವರ್ಷಗಳಿಂದ ವಯಮನಸ್ಸಿದೆ ಎಂದರೆ ಸರಿಯಲ್ಲ. ನನ್ನ ಮಗ ಆರೋಪಿತರನ್ನು ಪೋನಿನಲ್ಲಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆರೋೀಪಿತರು ನನ್ನ ಮಗನ ಮೇಲೆ ದೂರು ನೀಡುತ್ತಾರೆ ಎಂದು ನಾವೇ ಆರೋಪಿತರ ವಿರುದ್ಧ ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಇದೇ ಮೊದಲ ಬಾಗಿ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿ. ಕರೆಂಟ್ ನಮ್ಮ ಮನೆಯಿಂದ ಎಳೆದುಕೊಂಡಿರುವುದರಿಂದ ಗಲಾಟೆ ಆಗಿದೆ ಎಂದು ಹೇಳಿಕೆ ಬರೆಸಿರುತ್ತೇನೆ. ಆರೋಪಿತರು ಈ ಜಗಳಕ್ಕೂ ಸಂಬಂದ ಇಲ್ಲದಿದ್ದರೂ 1 ನೇ ಆರೋಪಿ ಮತ್ತು ನನ್ನ ಮಗನ ನಡುವೆ ಇರುವ ಜಗಳಕ್ಕೆ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> -ಇಲ್ಲ

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ